

# ಆಶಾ ದೀದಿಯ ಬರ್ತ್‌ಡೇ

ಕೊರೊನಾ ಗದ್ದಲದ ಮಧ್ಯೆಯೇ ಬಾಲಿವುಡ್‌ನ ಅನುಪಮ ಗಾಯಕಿ ಆಶಾ ದೀದಿಯ 87ನೆಯ ಜನ್ಮದಿನವೂ ಬಂದು ಹೋಗಿದೆ. ಸಾಮಾನ್ಯವಾಗಿ ಮುಂಬೈಯ ತಮ್ಮ ಮನೆಯಲ್ಲಿ ಕುಟುಂಬದ ಎಲ್ಲ ಸದಸ್ಯರ ಜೊತೆಗೆ ಹುಟ್ಟುಹಬ್ಬ ಆಚರಿಸುತ್ತಿದ್ದ ಆಶಾ ಭೋಸ್ಲೆ, ಈ ಸಲ ಕೊರೊನಾ ಕಾರಣದಿಂದಾಗಿ ಲೊನಾವಾಲದಲ್ಲಿರುವ ತಮ್ಮ ಬಂಗಲೆಯಲ್ಲಿ ಮೊಮ್ಮಕ್ಕಳ ಜೊತೆಗೆ ಹುಟ್ಟು ಹಬ್ಬ ಆಚರಿಸಬೇಕಾಯಿತು. ಮಾರ್ಚ್ 16ರಂದು ಒಂದು ವಾರದ ಮಟ್ಟಿಗೆ ಮೊಮ್ಮಕ್ಕಳ ಜೊತೆಗೆ ಇರೋಣ ಎಂದುಕೊಂಡು ಅವರು ಲೋನಾವಾಲಕ್ಕೆ ಹೊರಟದ್ದು. ಆದರೆ ಕೊರೊನಾ ಅಪ್ಪಳಿಸಿದ್ದರಿಂದ ಅವರು ಅಲ್ಲಿಂದ ವಾಪಸು ಮುಂಬೈಗೆ ಬರಲೇ ಇಲ್ಲ. "ನಮ್ಮ ಕುಟುಂಬದ ಸದಸ್ಯರಲ್ಲಿ ಪ್ರತಿಯೊಬ್ಬರ ಬರ್ತ್‌ಡೇಗೂ ಎಲ್ಲರೂ ಒಟ್ಟು ಸೇರುವುದು ವಾಡಿಕೆ. ಆದರೆ ಈ ಸಲ ಕುಟುಂಬದ ಬೇರೆ ಸದಸ್ಯರಾರೂ ಇಲ್ಲದೆ ಬರ್ತ್‌ಡೇ ಆಚರಿಸಬೇಕಾಯಿತು" ಎಂದಿದ್ದಾರೆ ಆಶಾ ದೀದಿ.

ಏಳು ದಶಕಗಳಿಂದ ಹಾಡುತ್ತಿರುವ ಆಶಾ ದೀದಿ 12 ಸಾವಿರಕ್ಕೂ ಹೆಚ್ಚು ಹಾಡುಗಳಿಂದ ಬಾಲಿವುಡ್‌ನಲ್ಲಿ ಗಿನ್ನೆಸ್ ದಾಖಲೆಯೊಂದನ್ನು ಬರೆದಿದ್ದಾರೆ. 16ರ ಹರೆಯದಲ್ಲೇ ಮನೆಯಿಂದ ಓಡಿಹೋಗಿ ಮದುವೆಯಾದ ಗಣಪತರಾವ್ ಬೋಸ್ಲೆ ಅವರಿಂದ, ದೂರವಾಗಿ ಇಪ್ಪತ್ತು ವರ್ಷಗಳ ಬಳಿಕ 1980ರಲ್ಲಿ ಅವರು ಸಂಗೀತ ನಿರ್ದೇಶಕ ಆರ್.ಡಿ.ಬರ್ಮನ್ (ಪಂಚಮ್ ದಾ) ಜೊತೆಗೂಡಿದ್ದು. ಅವರ ಮಾತು ಪತಿ ಪಂಚಮ್ ದಾ ಸ್ಮರಣೆಯಿಲ್ಲದೆ ಈಗಲೂ ಮುಂದಕ್ಕೆ ಹೋಗುವುದೇ ಇಲ್ಲ. ಪತ್ರಕರ್ತೆಯಾಗಿದ್ದ ಮಗಳು ವರ್ಷಾ ತನ್ನ 56ರ ವಯಸ್ಸಿನಲ್ಲಿ ಆತ್ಮಹತ್ಯೆ ಮಾಡಿಕೊಂಡದ್ದು ಅವರು ಈಗಲೂ ದುಃಖಿಸುವ ಸಂಗತಿ. ಪೈಲಟ್ ಆಗಿದ್ದ ಮೊದಲ ಮಗ ಹೇಮಂತ್ ಆ ಬಳಿಕ ಸಂಗೀತ ನಿರ್ದೇಶನಕ್ಕೆ ಇಳಿದದ್ದು. 2015ರಲ್ಲಿ ಅವರು ಕ್ಯಾನ್ಸರ್‌ಗೆ ಬಲಿಯಾದರು. ಕೊನೆಯ ಮಗ ಆನಂದ್ ಮತ್ತು ಮೊಮ್ಮಕ್ಕಳು ಆಶಾ ದೀದಿಯ ಸಂಗೀತ ವೃತ್ತಿ ಜೀವನದ ವಿಷಯಗಳನ್ನು ಈಗಲೂ ನೋಡಿಕೊಳ್ಳುತ್ತಿದ್ದಾರೆ.

ಸಿನಿಮಾಗೆಂದು ಅವರು ಕೊನೆಯದಾಗಿ ಹಾಡಿದ್ದು 1974ರಲ್ಲಿ. ಆ ಬಳಿಕ ಹಲವು ಸೋಲೊ ರೆಕಾರ್ಡ್‌ಗಳು ಬಂದಿವೆ. ಸಿನಿಮಾ ಕಾರ್ಯಕ್ರಮಗಳಲ್ಲಿ ಈಗಲೂ ಅವರು ಭಾಗವಹಿಸುವುದಿದೆ. ಈ ವಯಸ್ಸಿನಲ್ಲೂ ಅವರ ಜೀವನೋತ್ಸಾಹ ಕುಂದಿಲ್ಲ. ‘ಖುಷಿಯಾಗಿರಿ. ಯಾವತ್ತೂ ಒಳ್ಳೆಯ ಸಂಗತಿಗಳನ್ನೇ ಯೋಚಿಸಿ. ಋಣಾತ್ಮಕ ಸಂಗತಿಗಳತ್ತ ಗಮನ ಕೊಡಬೇಡಿ’ ಎಂದು ತನ್ನ 87ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರು ಟ್ವೀಟ್ ಮಾಡಿದ್ದಾರೆ.

ಸದ್ಯಕ್ಕೆ ಅವರ ‘ಆಶಾ ಕಿ ಆಶಾ’ ಯೋಜನೆ ಸುದ್ದಿ ಮಾಡುತ್ತಿದೆ. ಹೊಸ ಪ್ರತಿಭೆಗಳನ್ನು ಶೋಧಿಸಿ ಪ್ರೋತ್ಸಾಹಿಸುವ ಈ ಯೋಜನೆಗೆ ಈಗಾಗಲೆ 3000ಕ್ಕೂ ಹೆಚ್ಚು ಎಂಟ್ರಿಗಳು ಬಂದಿವೆಯಂತೆ. ‘ಈ ಯೋಜನೆಯಲ್ಲಿ ಗೆದ್ದವರಿಗೆ ಮಾತ್ರವಲ್ಲ, ಸೋತ ಪ್ರತಿಭಾವಂತರಿಗೂ ಏನಾದರೂ ಮಾಡಬೇಕು’ ಎಂದಿದ್ದಾರೆ ಆಶಾ. ಈ ಇಳಿವಯಸ್ಸಿನಲ್ಲೂ ಅವರು ಸದಾ ಕ್ರಿಯೇಟಿವ್. ದುಬೈ ಮತ್ತು ಕುವೈತ್‌ನಲ್ಲಿ ಅವರ ಏಳೆಂಟು ‘ಆಶಾಸ್’ ರೆಸ್ಟೋರೆಂಟ್‌ಗಳಿವೆ. ತಮ್ಮ ರೆಸ್ಟೋರೆಂಟ್‌ಗೆ ತಾವೇ ಹೊಸ ರೆಸಿಪಿಗಳನ್ನು ಒದಗಿಸುವುದು ಅವರ ಇಷ್ಟದ ಕೆಲಸ! ತಮ್ಮ ಹೋಟೆಲ್ಲಿನ ಶೆಫ್‌ಗಳಿಗೆ ಅವರೇ ಖುದ್ದಾಗಿ ಆರು ತಿಂಗಳ ಅಡುಗೆ ತರಬೇತಿ ನೀಡಿದ್ದಾರೆ. ‘ನನ್ನ ಹೋಟೆಲ್ಲಿನ ಬಿರಿಯಾನಿಗೆ ನಾನೇ ಮಸಾಲೆ ಹದ ಮಾಡುತ್ತೇನೆ. ಕೊರೊನಾ ಲಾಕ್‌ಡೌನ್ ಪೂರ್ತಿ ಮುಗಿದ ಬಳಿಕ ರೆಸ್ಟೋರೆಂಟ್‌ನಲ್ಲಿ ಫಿಶ್, ಸೀಗಡಿ, ಚಿಕನ್ ವಿಶೇಷಗಳನ್ನು ಪರಿಚಯಿಸಲಿದ್ದೇನೆ’ ಎಂದಿದ್ದಾರೆ ಆಶಾ ದೀದಿ.



# ಕಂಗನಾ ‘ದಿ ಫೈಟರ್’

ಬಾಲಿವುಡ್‌ನಲ್ಲಿ ‘ಜಗಳಗಂಟಿ’ ಎಂದೇ ಹೆಸರಾದಾಕೆ ಕಂಗನಾ ರನೌಟ್. ಆದರೆ ಈ ಸಲ ಈಕೆಯ ಜಗಳಕ್ಕೆ ರಾಷ್ಟ್ರೀಯ ಆಯಾಮ ಒದಗಿದೆ. ಈವರೆಗೆ ಈಕೆ ಜಗಳ ಆಡುತ್ತಿದ್ದುದು ಸಹನಟ, ನಟಿಯರ ಜೊತೆಗೆ. ಆದರೆ ಈಗ ಮಹಾರಾಷ್ಟ್ರ ಸರ್ಕಾರಕ್ಕೇ ಡಿಚ್ಚಿ ಹೊಡೆದಿರುವುದು ದೊಡ್ಡ ಸುದ್ದಿಯಾಗಿದೆ.

ಸುಶಾಂತ್‌ಸಿಂಗ್ ಆತ್ಮಹತ್ಯೆ ಬಳಿಕ ಆತನ ಪರ ಗಟ್ಟಿಯಾಗಿ ಮಾತನಾಡಿದ ಮೊದಲ ನಟಿ ಕಂಗನಾ. ಆಕೆಯ ಧೈರ್ಯದ ಬಗ್ಗೆ ಎರಡು ಮಾತೇ ಇಲ್ಲ. ಆದರೆ ಸುಶಾಂತ್ ಆತ್ಮಹತ್ಯೆ ರಾಜಕೀಯ ತಿರುವು ಪಡೆದುಕೊಂಡು ಮುಂಬೈ ಪೊಲೀಸ್ ಮತ್ತು ಬಿಹಾರದ ಪೊಲೀಸ್ ನಡುವಣ ಕೋಳಿ ಕಾಳಗವಾದ ಬಳಿಕ ಕಂಗನಾ ಹೋರಾಟಕ್ಕೆ ಹೆಚ್ಚು ಬಲ ಬಂದಿತು. ಕಂಗನಾ ತನ್ನ ಮನೆಯ ವಿಸ್ತರಣೆಗೆ ಪಾಲಿಕೆಯಿಂದ ಸೂಕ್ತ ಲೈಸೆನ್ಸ್ ಪಡೆದಿಲ್ಲ ಎಂದು ಅಲ್ಲಿನ ಮಹಾನಗರಪಾಲಿಕೆ ಬುಲ್ಡೋಜರ್ ಮಾಡಿದೆ. ಹಿಮಾಚಲ ಪ್ರದೇಶದಲ್ಲಿರುವ ಹುಟ್ಟೂರಿನಿಂದ ಮುಂಬೈಗೆ ವಾಪಸಾದಾಗ ಆಕೆಗೆ ಕೇಂದ್ರ ಸರ್ಕಾರ ಖುದ್ದಾಗಿ ವೈ ದರ್ಜೆಯ ಭದ್ರತೆ ನೀಡಿರುವುದು ಈಗ ಇಡೀ ಪ್ರಕರಣ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವಣ ಜಿದ್ದಾಜಿದ್ದಿಯಂತೆ ಕಾಣಿಸುತ್ತಿದೆ.

ತಮಿಳ್ನಾಡಿನ ಮಾಜಿ ಮುಖ್ಯಮಂತ್ರಿ ಜಯಲಲಿತಾ ಪಾತ್ರದಲ್ಲಿ ‘ತಲೈವರ್’ ಚಿತ್ರದಲ್ಲಿ ಈಗ ನಟಿಸುತ್ತಿರುವ ಕಂಗನಾ, ಮುಂದಿನ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಪಡೆದು ಸ್ಪರ್ಧಿಸಿದರೂ ಅಚ್ಚರಿಯಿಲ್ಲ ಎಂದು ಬಾಲಿವುಡ್‌ನ ಗುಸುಗುಸು ಶುರುವಾಗಿದೆ.

■ ಬಿಂದು